# ಎಲ್ಲ ಭಾರತೀಯರಿಗೆ ಸುರಕ್ಷಿತ ಆಹಾರ ಒದಗಿಸಲು ಕೃಷಿ ಸಚಿವರನ್ನು ಒತ್ತಾಯಿಸಿರಿ

ಭಾರತದಲ್ಲಿ ಆಹಾರ ಮತ್ತು ನೀರಿನಂಥ ಪ್ರಾಕೃತಿಕ ಸಂಪನ್ಮೂಲಗಳು ಕೀಟನಾಶಕಗಳಿಂದಾಗಿ ವಿಷಮಯಗೊಂಡಿವೆ. ಕೀಟ ಹಾಗೂ ಕ್ರಿಮಿನಾಶಕಗಳು ಪರಿಸರಕ್ಕೆ ಧಕ್ಕೆಯುಂಟು ಮಾಡುತ್ತಿವೆ; ನಮ್ಮೆಲ್ಲರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿವೆ. ಇವೆಲ್ಲವನ್ನು ನಿಯಂತ್ರಿಸಬಹುದಾದ ವ್ಯವಸ್ಥೆಯೊಂದನ್ನು ಸರ್ಕಾರ ರೂಪಿಸಿದೆಯಾದರೂ, ಆ ವ್ಯವಸ್ಥೆಯಲ್ಲೇ ಹಲವು ದೋಷಗಳು ಇವೆ. ಹೀಗಾಗಿ ಕಾಯ್ದೆ– ಕಾನೂನು ಜಾರಿಯಲ್ಲಿ ಅಡ್ಡಿಯಾಗಿದೆ.

ಉದಾಹರಣೆಗೆ; ಸುರಕ್ಷತೆ ಅಥವಾ ಪರ್ಯಾಯ ಮಾರ್ಗಗಳನ್ನು ಗಮನಿಸಿ, ಅಪಾಯ ಲೆಕ್ಕ ಹಾಕಿದ ಬಳಿಕವಷ್ಟೇ ಕೀಟನಾಶಕವೊಂದನ್ನು ನೋಂದಾಯಿಸಬೇಕು. ಆದರೆ ಅದು ಆಗುತ್ತಿಲ್ಲ. ಬೇರೆ ದೇಶಗಳಲ್ಲಿ ನಿಷೇಧಕ್ಕೆ ಒಳಗಾದ ಕೀಟನಾಶಕಗಳು ಭಾರತದಲ್ಲಿ ಮಾರಾಟ ಹಾಗೂ ಬಳಕೆಗೆ ಮುಕ್ತವಾಗಿವೆ. ಇದಕ್ಕೆ ತಕ್ಕಂತೆ ನಮ್ಮ ಸರ್ಕಾರದ ಧೋರಣೆಯಿದೆ. ರಾಸಾಯನಿಕಗಳು ತಂದೊಡ್ಡುವ ಅಪಾಯವನ್ನಾಗಲೀ, ಪರ್ಯಾಯ ಕೃಷಿ ವಿಧಾನಗಳ ಬಗೆಗಾಗಲೀ ಸಂಶೋಧನೆ ನಡೆಸಲು ಅಗತ್ಯ ಪ್ರಮಾಣದ ಅನುದಾನ ಒದಗಿಸುವುದೇ ಇಲ್ಲ.

ಬೃಹತ್ ಪ್ರಮಾಣದಲ್ಲಿ ಅನುಷ್ಠಾನ ಮಾಡಲಾಗುವ 'ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ'ಗೆಂದು (ಆರ್‌ಕೆವಿವೈ ಅಥವಾ ರಾಷ್ಟ್ರೀಯ ಕೃಷಿ ಅಭಿವೃದ್ಧಿ ಕಾರ್ಯಕ್ರಮ) ಖರ್ಚು ಮಾಡುವ ಒಟ್ಟು ಹಣದಲ್ಲಿ ಶೇಕಡ 2ರಷ್ಟನ್ನು ಸಹ ಸಾವಯವ ಕೃಷಿಗೆ ವೆಚ್ಚ ಮಾಡುತ್ತಿಲ್ಲ. ರಾಸಾಯನಿಕ ಕೃಷಿಗೇ ಹೆಚ್ಚು ಒತ್ತು ಕೊಡಲಾಗುತ್ತಿದೆ. ಎಲ್ಲ ಭಾರತೀಯರಿಗೆ ಸುರಕ್ಷಿತ ಆಹಾರ ಕೊಡುವ ನಿಟ್ಟಿನಲ್ಲಿ, ಈ ನಿಲುವು ಬದಲಾಗಬೇಕಿದೆ.

ಸುರಕ್ಷಿತ ಆಹಾರ ನಮ್ಮ ಹಕ್ಕು
ರಾಸಾಯನಿಕ ಬೇಡ - ಕುಲಾಂತರಿಯೂ ಬೇಡ
www.indiaforsafefood.in
ಈಗಲೇ ಸಂಪರ್ಕಿಸಿರಿ, ಒಂದು ಮಿಸ್ ಕಾಲ್ ಕೊಡಿ!
022 3301 0031

**'ನಮಗೆ ಸುರಕ್ಷಿತ ಆಹಾರ ಪಡೆಯುವ ಹಕ್ಕು ಇದೆ. ಹೀಗಾಗಿ ಅಂಥ ಆಹಾರ ಪಡೆಯುವ ಕೃಷಿ ವಿಧಾನ ಜಾರಿಗೆ ತನ್ನಿ' ಎಂದು ಭಾರತ ಸರ್ಕಾರದ ಕೃಷಿ ಸಚಿವ ಶರದ್ ಪವಾರ್ ಅವರನ್ನು ಒತ್ತಾಯಿಸಿ.**

(ಸಮಗ್ರ ಹಾಗೂ ಸುಸ್ಥಿರ ಕೃಷಿ ಮೈತ್ರಿಕೂಟ– 'ಆಶಾ' ಪ್ರಕಟಿತ)

---

ಗೆ,

ಕೇಂದ್ರ ಕೃಷಿ ಸಚಿವರು

ಭಾರತ ಸರ್ಕಾರ

ಮಾನ್ಯ ಕೃಷಿ ಸಚಿವರೇ,

ವಿಷಯ: ಸುರಕ್ಷಿತ ಆಹಾರದ ಹಕ್ಕು

ಭಾರತದ ನಾಗರಿಕರಾದ ನಮಗೆ ಸುರಕ್ಷಿತ ಆಹಾರ ಪಡೆಯಲು ಹಕ್ಕು ಇದೆ. ಇಂಥ ಆಹಾರ ನಮಗೆ ಸಿಗುವಂತೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ.

ಇಂದಿನ ದಿನಗಳಲ್ಲಿ ಆಹಾರವು ಹಲವು ಕಾರಣಗಳಿಂದಾಗಿ ಉತ್ಪಾದನಾ ಹಂತದಿಂದಲೇ ವಿಷಯುಕ್ತ ರಾಸಾಯನಿಕಗಳಿಂದ ಕಲುಷಿತಗೊಂಡಿರುತ್ತದೆ. ರಾಸಾಯನಿಕಗಳ ಬಳಕೆ ಹಾಗೂ ಕುಲಾಂತರಿ ತಂತ್ರಜ್ಞಾನದ ಹೊರತಾಗಿಯೂ ಕೃಷಿ ಆರ್ಥಿಕವಾಗಿ ಲಾಭದಾಯಕ ಹಾಗೂ ಸುಸ್ಥಿರ ಎಂಬುದು ಹಲವು ಅಧ್ಯಯನ ಹಾಗೂ ಪ್ರಯೋಗಗಳ ಮೂಲಕ ಸಾಬೀತಾಗಿದೆ.

ಸಾವಯವ ಹಾಗೂ ಕೀಟನಾಶಕಮುಕ್ತ ಉತ್ಪಾದನಾ ವಿಧಾನಗಳು ಪರಿಸರಕ್ಕೆ ಪೂರಕ. ಇದರಿಂದ ರೈತರಿಗೆ ಅಧಿಕ ಆದಾಯ; ಉತ್ತಮ ಆರೋಗ್ಯ ಹಾಗೂ ಮೌಲ್ಯಯುತ ಉತ್ಪನ್ನ ಸಿಗಲು ಸಾಧ್ಯವಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಸಾಧ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳುವ ಮೂಲಕ, ನಮಗೆ ಸುರಕ್ಷಿತ ಆಹಾರ ಒದಗಿಸಿಕೊಡುವ ಭರವಸೆ ನೀಡಬೇಕು.

- ಸಾವಯವ/ ಪರಿಸರಸ್ನೇಹಿ/ ನೈಸರ್ಗಿಕ ಕೃಷಿ ವಿಧಾನಗಳನ್ನು ಉತ್ತೇಜಿಸುವ ಜತೆಗೆ ಈ ವಿಭಾಗದಲ್ಲಿ ಸಂಶೋಧನೆ, ವಿಸ್ತರಣೆಗೆ ಆದ್ಯತೆ ನೀಡಿ.
- ರಾಸಾಯನಿಕಮುಕ್ತ ಆಹಾರ ಉತ್ಪಾದನೆಗೆ ಪ್ರೋತ್ಸಾಹ ನೀಡುವುದು ಹಾಗೂ ಕುಲಾಂತರಿ ಬೆಳೆಯನ್ನು ನಿಷೇಧಿಸುವುದು.
- ಭಾರತದಾದ್ಯಂತ ಸಾವಯವ ಆಹಾರಧಾನ್ಯ ಮಾರಾಟದ ಮಳಿಗೆ ತೆರೆಯಬೇಕು. ಕನಿಷ್ಠ 50,000 ಜನರಿಗೆ ಒಂದಾದರೂ ಮಳಿಗೆ ಇರುವಂತೆ
- ನೋಡಿಕೊಳ್ಳಬೇಕು. ಈ ಮಳಿಗೆಗಳಿಗೆ ಸತತ ಆಹಾರ ಸರಬರಾಜು ಇರುವಂತೆ ವ್ಯವಸ್ಥೆ ರೂಪಿಸಿ, ಗ್ರಾಹಕರಿಗೆ ಪೂರಕ ಬೆಲೆಯಲ್ಲಿ ವಿಷಮುಕ್ತ ಆಹಾರ
- ಸಿಗುವಂತೆ ಮಾಡಬೇಕು. ಪಡಿತರ ವ್ಯವಸ್ಥೆಯ ಮೂಲಕ ಕೂಡ ಸಾವಯವ ಆಹಾರಧಾನ್ಯ ವಿತರಣೆಗೆ ಮುಂದಾಗಬೇಕು.
- ಗರ್ಭಿಣಿಯರು, ಬಾಣಂತಿಯರು, ಶಿಶುಗಳು ಹಾಗೂ ಮಕ್ಕಳಿಗೆ ಹಲವು ಯೋಜನೆಗಳ ಮೂಲಕ ಆಹಾರ ವಿತರಿಸುತ್ತಿದ್ದು, ವಿಷಮುಕ್ತ ಆಹಾರ ಇವರೆಲ್ಲರಿಗೆ
- ಸಿಗುವಂತೆ ಕಾರ್ಯಕ್ರಮ ರೂಪಿಸಬೇಕು.
- ಬೇರೆ ದೇಶಗಳಲ್ಲಿ ನಿಷೇಧದಕ್ಕೆ ಒಳಗಾದ ಪೀಡೆನಾಶಕಗಳನ್ನು ಭಾರತದಲ್ಲಿ ಬಳಸುವುದು ಅಥವಾ ಮಾರಾಟ ಮಾಡುವುದಕ್ಕೆ ನಿಷೇಧ ವಿಧಿಸಬೇಕು.

ವಂದನೆಗಳೊಂದಿಗೆ,

ಹೆಸರು: ______________________ ಇಮೇಲ್: ______________________

ಫೋನ್: ______________________ ಊರು: ______________________ ರಾಜ್ಯ: ______________________